ಮುಂದುವರಿಸಬೇಕೆಂದು ನಮ್ಮ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಅದರಂತೆ ಇನ್ನೊಂದು ತಿಂಗಳು ಸಮಯವನ್ನು ವಿಸ್ತರಣೆ ಮಾಡಲಾಗಿದೆ. ಅದರ ಲಾಭವನ್ನು ರೈತರುಗಳು ಪಡೆದುಕೊಳ್ಳಬೇಕು.

ಖ) ಹಾಸನದಲ್ಲಿ ಹೇಮಾವತಿ ಮಹಿಳಾ ಸಹಕಾರ ಬ್ಯಾಂಕ್ ಸ್ಥಾಪನೆ ವಿಳಂಬ.

ಶ್ರೀ ಎ. ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಉಪಾಧ್ಯಕ್ಷರೆ, ಹಾಸನದಲ್ಲಿ 'ಹೇಮಾವತಿ ಮಹಿಳಾ ಸಹಕಾರ ಬ್ಯಾಂಕ್' ಅನ್ನು ಸ್ಥಾಪನೆ ಮಾಡಬೇಕೆಂದು ಅಲ್ಲಿನ ಮಹಿಳೆಯರು ವಿನಂತಿ ಮಾಡಿಕೊಂಡ ಮೇಲೆ ಅದಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್‌ನವರು ಅನುಮತಿ ನೀಡಿದರು. ಅವರು ಅನುಮತಿ ಕೊಟ್ಟ ಮೇಲೆ ಮೂಲಭೂತವಾಗಿ ಅದಕ್ಕೆ ಸಂಬಂಧಪಟ್ಟಂತೆ ಏನೇನು ಅವಶ್ಯಕತೆಗಳನ್ನು ಪೂರೈಸಬೇಕೋ, ಆ ಎಲ್ಲಾ ಅವಶ್ಯಕತೆಗಳನ್ನು ಕೂಡ ಆ ಸಂಘದವರು ಪೂರೈಸಿದ್ದಾರೆ. ಅಲ್ಲಿ ಜೀಪ್ ಪ್ರಮೋಟರ್ ಮತ್ತು ಪ್ರಮೋಟರ್‌ಗಳನ್ನು ಕೂಡ ನೇಮಕ ಮಾಡಲಾಗಿದೆ. 12 ಲಕ್ಷ ಶೇರು ಸಂಗ್ರಹಣೆ ಮಾಡಬೇಕಾದ ಕಡೆ 18 ಲಕ್ಷ ಶೇರು ಸಂಗ್ರಹಣೆ ಮಾಡಿ ಹಣ ಕಟ್ಟಿದ್ದಾರೆ. ಆದರೂ ಕೂಡ, ಆ ಸಹಕಾರ ಸಂಘದ ಬ್ಯಾಂಕ್‌ನ್ನು ಇನ್ನೂ ನೋಂದಾವಣೆ ಮಾಡುತ್ತಿಲ್ಲ. ಹಾಸನದಲ್ಲಿ ಎಲ್ಲಾ ಕೆಲಸಗಳೂ ಆಗುತ್ತವೆಂದು ಕೆಲವರಿಗೆ ಭಾವನೆ ಇದೆ. ಆದರೆ, ಅಲ್ಲಿ ಅವರಿಗೆ ಏನು ಇಷ್ಟು ಇದೆಯೋ ಅದೆಲ್ಲಾ ಆಗುತ್ತದೆ, ಅದರ ಇಷ್ಟಕ್ಕೆ ಏನು ವಿರುದ್ಧರಾಗಿರುತ್ತದೆ, ಅದು ಯಾವುದೂ ಆಗುವುದಿಲ್ಲ. ಹಾಸನದಲ್ಲಿ ಪ್ರಜಾಪ್ರಭುತ್ವ ಇಲ್ಲ. ಅಲ್ಲಿ ಇರತಕ್ಕಂಥಾದ್ದು ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ. ಬ್ಯಾಂಕ್ ಮಾಡಲು ಹಣವನ್ನು ಕಟ್ಟಿದ್ದರೂ ನೋಂದಾಣಿ ಮಾಡುವುದಕ್ಕೆ ಅವಕಾಶ ಕೊಡುತ್ತಿಲ್ಲ, ಏಕೆ ಕೊಡುತ್ತಿಲ್ಲವೆಂದು ಸರ್ಕಾರ ಉತ್ತರ ಕೊಡಬೇಕು. ಮತ್ತು ಕೂಡಲೇ ನೋಂದಾಣಿ ಮಾಡಿಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಇದರಲ್ಲಿ ಕಾನೂನಿನ ಪ್ರಕಾರ ಒಂದು ಸೊಸೈಟಿಯನ್ನು ರಿಜಿಸ್ಟರ್ ಮಾಡಬೇಕೆಂದರೆ ಎಷ್ಟು ಬಂಡವಾಳ ಬೇಕು ಮತ್ತು ಎಷ್ಟು ಸದಸ್ಯರು ಇರಬೇಕೆಂಬ ನಿಯಮದ ಪ್ರಕಾರ ಮಾಡಿದ ಮೇಲೂ ಕೂಡ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ. ಮತ್ತು ಡೆಪ್ಯೂಟಿ ರಿಜಿಸ್ಟ್ರಾರ್ ಮತ್ತು ಇತರ ಸಂಬಧಪಟ್ಟ ಅಧಿಕಾರಿಗಳು ಇದು ಸರಿಯಾಗಿದೆ ಎಂದು ಹೇಳಿದರೂ ಕೂಡ ಆ ಸೊಸೈಟಿಯ ರಿಜಿಸ್ಟ್ರೇಷನ್ ಮಾಡಬಾರದು ಎನ್ನುವುದಕ್ಕೆ ಉದ್ದೇಶ ಏನು ಇದೆ? ಕಾನೂನಿನ ಪ್ರಕಾರ ಎಲ್ಲಾ ಸರಿ ಇದ್ದರೂ ಆ ಮಹಿಳಾ ಸಹಕಾರ ಸಂಘದ ಬ್ಯಾಂಕಿನ ರಿಜಿಸ್ಟ್ರೇಷನ್ ಅನ್ನು ತಡೆಹಿಡಿಯುವುದು ಎಷ್ಟರಮಟ್ಟಿಗೆ ಸರಿ? ಬೇರೆ ಕಡೆ

ಎಲ್ಲಾ ಮಾಡಿ ಅಲ್ಲಿ ಮಾತ್ರ ಏಕೆ ಮಾಡಲಿಲ್ಲ? ಇದರ ಅರ್ಥ ಏನೆಂದರೆ ಇದರಲ್ಲಿ ಯಾರದ್ದಾರರೂ ರಾಜಕೀಯ ಇಂಟರ್‌ಫಿಯರೆನ್ಸ್ ಹೋಗಿದ್ದಿದ್ದರೆ ಇದು ಸಹಜವಾಗಿ ರಿಜಿಸ್ಟ್ರೇಷನ್ ಆಗುತ್ತಿತ್ತು. ಇದನ್ನು ದುರುದ್ದೇಶದಿಂದಲೇ ತಡೆಹಿಡಿದಿದೆ. ಇದು ಖಂಡಿತ. ಇದನ್ನು ವೇರಿಫೈ ಮಾಡಿ, ರೇಕಾರ್ಡ್ಸ್ ನೋಡಿ, ಬೇರೆ ಕಡೆ ಇದೇ ರೀತಿಯಾಗಿ ಮಾಡಿದ್ದಾರೆಯೇ ಅಥವಾ ಇಲ್ಲವೇ ಎಂಬುದು ಗೊತ್ತಾಗುತ್ತದೆ. ಅದಕ್ಕಾಗಿ ದಯೆಯಿಟ್ಟು ಅದನ್ನು ತಕ್ಷಣ ರಿಜಿಸ್ಟ್ರೇಷನ್ ಮಾಡಿಸಬೇಕು. ಯಾವುದೇ ಮಧ್ಯಪ್ರವೇಶ ಮಾಡಬಾರದು. ಈ ರೀತಿ ಕೋ-ಆಪರೇಟಿವ್ ಸೊಸೈಟಿಗಳಲ್ಲಿ ನೀವು ರಾಜಕೀಯ ಮಾಡಿಕೊಳ್ಳುತ್ತಾ ಹೋದರೆ ಇದಕ್ಕೆ ಅಂತ್ಯವೇ ಇಲ್ಲದಂತಾಗುತ್ತದೆ. ಆದ್ದರಿಂದ ನೀವು ಸ್ಪಷ್ಟವಾಗಿ ಹೇಳಬೇಕು. ಇದು ಅಂತ್ರರಾಷ್ಟ್ರೀಯ ಮಹಿಳಾ ವರ್ಷ ಈಗಲೂ ಕೂಡ ಅವರಿಗೆ ನ್ಯಾಯ ಸಿಗದೇಹೋದರೆ, ಮತ್ತೇ ಯಾವಾಗ ನ್ಯಾಯ ಕೊಡುತ್ತೀರೋ ನನಗೆ ಗೊತ್ತಿಲ್ಲ.

12.10.ಎ.ಎಂ.

ಶ್ರೀ ಬಿ. ಶಿವರಾಂ : ಇವರು ಹೋದಸಾರಿ ಆಶ್ವಾಸನೆ ಕೊಟ್ಟು 15 ದಿವಸದೊಳಗೆ ಮಾಡಿಕೊಡುತ್ತೇವೆಂದು ಹೇಳಿದ್ದರು, ಆದರೆ ಇಲ್ಲಿ ಯವರೆಗೆ ಅದು ಆಗಿಲ್ಲ.

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ಇದರಲ್ಲಿ ರಾಜಕೀಯ ಹಸ್ತಕ್ಷೇಪ ಇದೆ ಎಂದು ಹೇಳುತ್ತಾರೆ. ಮಹಿಳಾ ಬ್ಯಾಂಕಿನ ಚೀಫ್ ಪ್ರಮೋಟರ್‌ನ ಅಪ್ರೂವ್ ಮಾಡಿರುವುದು ನಮ್ಮ ಸರ್ಕಾರ ಬಂದ ಮೇಲೆ ಮಾಡಿದ್ದು ಅದರಲ್ಲಿ ಹಿಂದೆ ಮಾಜಿ ವಿಧಾನ ಪರಿಷತ್ ಸದಸ್ಯರಾದ ಕೃಷ್ಣಮೂರ್ತಿಯವರ ಧರ್ಮಪತ್ನಿಯರು ಇದ್ದರು. ಅವರು ಅಧ್ಯಕ್ಷರಾಗಿದ್ದರು, ಕೃಷ್ಣಮೂರ್ತಿಯವರು ತೀರಿ ಹೋದ ಮೇಲೆ, ಅಧ್ಯಕ್ಷರ ಚುನಾವಣೆ ನಡೆಯಿತು. ನಾವು ಇದರಲ್ಲಿ ಯಾವುದೇ ರಾಜಕೀಯ ಹಸ್ತಕ್ಷೇಪ ಮಾಡಿಲ್ಲ. ಯಾರನ್ನು ಬೇಕಾದರೆ ಮಾಡಿಕೊಳ್ಳಲಿ ಎಂದು ಅವರನ್ನೇ ಚೀಫ್ ಪ್ರಮೋಟರ್‌ನ್ನಾಗಿ ಮಾಡಿದೆವು ಬೇಕಾದರೆ ಈ ಚೀಫ್ ಪ್ರಮೋಟರ್ ಮಾಡುವುದರಲ್ಲಿ ನಾವು ರಾಜಕೀಯ ಮಾಡಿದ್ದರೆ, ಅವರು ಸಹಕಾರ ಸಚಿವರನ್ನು ಕೇಳಲಿ. ಇದಾದ ಮೇಲೆ ಅವರು 18 ಲಕ್ಷ ರೂಪಾಯಿ ಷೇರು ಕಲೆಕ್ಟ್ ಮಾಡಿದ್ದೇವೆಂದು ತಿಳಿದು ಬಂದ ಮೇಲೆ, ಇಲ್ಲಿ ಮಾನ್ಯ ಸಹಕಾರ ಸಚಿವರು ಇದ್ದಾರೆ. ಎರಡು ಪಾರ್ಟಿಯವರು ಒಂದು ಕಡೆ ಸರಿ 9 ಜನ ಅವರನ್ನೇ ಏನು ಚೀಫ್ ಪ್ರಮೋಟರ್ ಸದಸ್ಯರಾಗಿದ್ದಾರೆ...

(ಗೊಂದಲ)

ಶ್ರೀ ಜೆ. ಸಿ. ಮಾಧುಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ನನ್ನದೊಂದು ಕ್ರಿಯಾ ಲೋಪ ಇದೆ. Whether the Government is replying or an individual is reply ing ?

(Interruptions)

ಈ ಪ್ರಶ್ನೆಗೆ ಉತ್ತರ ಕೊಡುತ್ತಿದೆಯೋ ಅಥವಾ ಇಂಡಿವಿಜಯಲ್ ಆಗಿ ಉತ್ತರ ಕೊಡುತ್ತಿದ್ದಾರೋ ಎಂಬುದನ್ನು ಹೇಳಬೇಕು.

ಉಪಾಧ್ಯಕ್ಷರು : ತಾವು ಹೀಗೆ ಮಧ್ಯೆ ಮಾತನಾಡಬಾರದು, ಅವರು ಉತ್ತರ ಕೊಡುವಾಗ ತಾವು ಎದ್ದು ನಿಲ್ಲಬಾರದು.ಅವರ ಉತ್ತರವನ್ನು ಕೇಳಿ, ನಿಮಗೆ ಅವರ ಉತ್ತರ ಕೇಳುವಷ್ಟು ಸೌಜನ್ಯ ಸಹಿತ ಇಲ್ಲ. ತಾವು ದಯಮಾಡಿ ಕುಳಿತುಕೊಳ್ಳಿ. ಈ ರೀತಿ 3-4 ಜನ ಒಂದೇ ಬಾರಿ ಎದ್ದು ನಿಂತರೆ ಹೇಗೆ ?

(ಗೊಂದಲ)

ಶ್ರೀ ಜೆ. ಸಿ. ಮಾಧುಸ್ವಾಮಿ : ಇಲ್ಲಿ ಅವರು ಸಹಕಾರ ಸಚಿವರ ಪರವಾಗಿ ಉತ್ತರ ಹೇಳಬೇಕು. ಆ ರೀತಿ ಅವರು ಸಹಕಾರ ಸಚಿವರ ಪರವಾಗಿ ಉತ್ತರ ಹೇಳುತ್ತಾರೆಯೇ ಎಂಬುದನ್ನು ನಾವು ಕೇಳುತ್ತಿದ್ದೇವೆ.

ಶ್ರೀ ಹೆಚ್. ಡಿ. ರೇವಣ್ಣ : ಈ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ಹೇಳಬೇಕಾಗುತ್ತದೆ. ಇದರಲ್ಲಿ ರಾಜಕೀಯ ಬೆರೆಸುವುದಕ್ಕೆ ಹೋಗಿಲ್ಲ.

(ಗೊಂದಲ)

ಶ್ರೀ ಬಿ. ಶಿವರಾಂ : ಇದೆಲ್ಲಾ ಒನ್ ಸೈಡ್ ಆಗಿದೆ, ಇದು ನಿಮಗೆ ಗೊತ್ತಾಗುತ್ತಾ ಇಲ್ಲ. ನೀವು ಅಲ್ಲಿರಬೇಕಾಗಿತ್ತು ಆಗ ನಿಮಗೆ ಗೊತ್ತಾಗುತ್ತಿತ್ತು.

(ಗೊಂದಲ)

ಉಪಾಧ್ಯಕ್ಷರು : ನೀವು ಎಲ್ಲಾ ದಯಮಾಡಿ ಕುಳಿತುಕೊಳ್ಳಿ. ಅವರು ಉತ್ತರ ಹೇಳುತ್ತಾರೆ.

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ನಾಣಯ್ಯನವರು ಏನು ಹೇಳುತ್ತಾರೆ ಎಂಬುದನ್ನು ದಯಮಾಡಿ ಕೇಳಿ,

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ವಿರೋಧಪಕ್ಷದ ನಾಯಕರು, ಹಾಸನದಲ್ಲಿ ಪಟ್ಟಣ ಮಹಿಳಾ ಬ್ಯಾಂಕ್ ಸ್ಥಾಪನೆಯಾಗತಕ್ಕಂಥ ವಿಚಾರದಲ್ಲಿ, ಹೇಳಿದ್ದಾರೆ. ಇದು ಎಲ್ಲಾ ಜಿಲ್ಲೆಗಳಲ್ಲಿಯೂ ಕೂಡ ಈಗಾಗಲೇ ಅಸ್ತಿತ್ವಕ್ಕೆ ಬಂದಿದೆ. ಹಾಸನದ್ದಿಲ ಯಾವುದೋ ರಾಜಕೀಯ ಕಾರಣಕ್ಕೋಸ್ಕರ ಅಸ್ತಿತ್ವಕ್ಕೆ ಬರಲಿಲ್ಲ, ಎನ್ನತಕ್ಕಂಥ ವಿಚಾರವನ್ನು ಹೇಳಿದರು. ಅಂದರೆ ಇದರಲ್ಲಿ ಏನೋ ರಾಜಕೀಯ ಇದೆ. ಆ ರಾಜಕೀಯ ಇರುವುದರಿಂದ ಇದು ಅಸ್ತಿತ್ವಕ್ಕೆ ಬಂದಿಲ್ಲ ಎಂಬ ವಿಚಾರವನ್ನು ಹೇಳಿದ ಮೇಲೆ ,ಈ ರೀತಿ ವಿರೋಧ ಪಕ್ಷದವರು ಹೇಳಿದ ಮೇಲೆ ರಾಜಕಾರಣ ಮಾಡುವವರು ಯಾರಾಗುತ್ತಾರೆ? ಇದು ಆಡಳಿತ ಪಕ್ಷದವರು ಎಂಬ ಅರ್ಥ ತಾನೇ? ಅದಕ್ಕೆ ಜಿಲ್ಲಾ ಉಸ್ತಾವಾರಿ ಸಚಿವರು ಇದ್ದಾರೆ. ಅವರು ಉತ್ತರ ಹೇಳುತ್ತಿದ್ದಾರೆ, ಈಗಾಗಲೇ 18 ಲಕ್ಷ ರೂಪಾಯಿಗಳ ಷೇರನ್ನು ಕೂಡಿಸಿ ಆಗಿದೆ, ಅಲ್ಲಿರತಕ್ಕಂಥ ಚೀಫ್ ಪ್ರಮೋಟರ್ ಯಾರಿದ್ದಾರೆ, ಚೀಫ್ ಪ್ರಮೋಟರ್ ಆಗಿರಬೇಕಾಗಿರತಕ್ಕಂಥವರನ್ನೂ ಕೂಡ ನೇಮಕ ಮಾಡಿ ಆಗಿದೆ. ಅಲ್ಲಿ ಮಹಿಳೆಯರು ಯಾರಿದ್ದಾರೆ, ಬಹುಶಃ ಆ ಸಂದರ್ಭದಲ್ಲಿ ಆ ಮಹಿಳೆಯರಲ್ಲಿ ಎರಡು ಗುಂಪುಗಳಾಗಿವೆ ಎನ್ನತಕ್ಕಂಥ ವಿಚಾರವನ್ನು ಹೇಳಿದರು. ನಾನು ಗುಂಪುಗಾರಿಕೆ ಬಗ್ಗೆಲ್ಲಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಇವತ್ತು ಬೇಕಾಗಿರತಕ್ಕಂಥದ್ದು ಕಾನೂನಿನ ಅಡಿಯಲ್ಲಿ ಅದಕ್ಕೆ ನೋಂದಣಿ ಆಗಬೇಕಾಗಿರತಕ್ಕಂಥ ವಿಚಾರ. ಮಾನ್ಯ ಸಹಕಾರ ಸಚಿವರು ಎರಡು ಕಡೆಯ ಗುಂಪಿನವರನ್ನು ಭೇಟಿ ಮಾಡಿ ಇದನ್ನು ಯಾವ ರೀತಿ ಮಾಡಬೇಕೆಂಬ ಬಗ್ಗೆ ಈಗಾಗಲೇ ಚರ್ಚೆ ಮಾಡಿದ್ದಾರೆ. ಕಾನೂನಿನ ಅಡಿಯಲ್ಲಿ ನಾವು ಈ ಕೆಲಸವನ್ನು ಮಾಡಬೇಕಾಗಿರತಕ್ಕಂಥ ಸಂದರ್ಭದಲ್ಲಿ ಒಂದು ಪಟ್ಟಣ ಮಹಿಳಾ ಸಹಕಾರಿ ಬ್ಯಾಂಕಿಗ್ ಸಂಬಂಧಪಟ್ಟ ಹಾಗೆ, ರಾಜಕಾರಣ ಮಾಡಲಿಕ್ಕೆ ಏನಿದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಹಿಂದೆ ನಾವು 3-4 ತಿಂಗಳಲ್ಲಿ 7-8 ಸಹಕಾರ ಬ್ಯಾಂಕ್‌ಗಳಿಗೆ ರಿಜಿಸ್ಟ್ರೇಷನ್ ಮಾಡಿಕೊಟ್ಟಿದ್ದೇವೆ. ಆಗ ನಾವು ಪಾರ್ಟಿ ಪಂಗಡ ಯಾವುದನ್ನು ನೋಡಿಲ್ಲ. ನೀವು ಅದನ್ನು ಹೇಳಿದರೆ ಹೇಗೆ? ನಾವು ಮಾಡಿ ಕೊಟ್ಟಿಲ್ಲವೇ ? ಒಂದೊಂದು ಜಿಲ್ಲೆಯಲ್ಲಿ ಎರಡೆರಡು ಮಾಡಿ ಕೊಟ್ಟಿದ್ದೇವೆ. ಮಾನ್ಯ ಸಹಕಾರ ಸಚಿವರನ್ನು ಕರೆಯಿಸಿ, ಅವರು ಉತ್ತರ ಕೊಡಲಿ, ಇದು ಯಾವ ಕಾರಣಕ್ಕಾಗಿ ನಿಂತಿದೆ. ಇದರಲ್ಲಿ ಹಸ್ತಕೇಪ ಇಲ್ಲ ಎಂಬುದನ್ನು ಅವರು ಹೇಳಲಿ. ಇದು ಅವರಿಗೆ ಸಂಬಂಧಪಟ್ಟಿದ್ದು. ಇದು ಯಾವ ಕಾರಣಕ್ಕಾಗಿ ರಿಜಿಸ್ಟ್ರೇಷನ್ ಮಾಡುವುದು ನಿಂತಿದೆ, ಅದರಲ್ಲಿ ಏನಾದರೂ ಕಾನೂನು ಲೋಪದೋಷಗಳು ಇದೆಯೋ ಅಥವಾ ಬಂಡವಾಳ ಕೂಡಿಸಿಲ್ಲವೇ ಅಥವಾ ಸದಸ್ಯರು ಏನಾದರೂ ಅದಕ್ಕೆ ಅಡಿ ಬರುತ್ತಿದ್ದಾರೆಯೇ

ಇದುಏನು ಎನ್ನುತಕ್ಕಂಥದ್ದು ಗೊತ್ತಾಗಬೇಕು. ಕಾರಣ ಇಲ್ಲದೆ ಏಕೆ ವಿಳಂಬವಾಗಿದೆ ಎಂಬುದನ್ನು ಅವರು ಹೇಳುವುದಕ್ಕಾಗುವುದಿಲ್ಲ. ಅವರು ಹೇಳಬಹುದು ಇದರಲ್ಲಿ ಹಸ್ತಕ್ಷೇಪ ಇಲ್ಲ, ನಾನು ಇದರಲ್ಲಿ ಹಸ್ತಕ್ಷೇಪ ಮಾಡಿಲ್ಲ ಎಂದು ಹೇಳಬಹುದು. ಆದರೆ ಇದು ಏತಕ್ಕಾಗಿ ನಿಂತಿದೆ ಎಂಬ ಬಗ್ಗೆ ಸಂಬಂಧಪಟ್ಟ ಇಲಾಖೆಯ ಮಂತ್ರಿಗಳು ಉತ್ತರ ಹೇಳಲಿ ಅವರು ಬೇಕಾದರೆ 4 ಗಂಟೆಗೆ ಬಂದರೆ, ಆಗಲೇ ಉತ್ತರ ಕೊಡಿಸಿ.

ಉಪಾಧ್ಯಕ್ಷರು : ಎರಡು ನಿಮಿಷದಲ್ಲಿ ಅವರು ಮುಗಿಸುತ್ತಾರೆ. ಅಮೇಲೆ ಬೇಕಾದರೆ ಸಹಕಾರ ಸಚಿವರು ಉತ್ತರ ಕೊಡುತ್ತಾರೆ.

ಶ್ರೀ ಎಂ. ಮಲ್ಲಿಕಾಜುನ ಖರ್ಗೆ : ಅವರು ಇದರಲ್ಲಿ ನನ್ನ ಮಧ್ಯಪ್ರದೇಶ ಇಲ್ಲವೆಂದು ಹೇಳುತ್ತಿದ್ದಾರೆ, ಅಲ್ಲಿಗೆ ಮುಗಿಯಿತು. ಅದಕ್ಕೆ ನಾವು ಅವರನ್ನು ಕೇಳೋಣ. ನಿಂತಿದೆ, ಯಾವ ಕಾನೂನಿನ ದೃಷ್ಟಿಯಿಂದ ನಿಂತಿದೆ, ನಿಂತಿದೆ ಎಂಬುದನ್ನು ಸಹಕಾರ ಸಚಿವರು ಹೇಳಲಿ.

ಉಪಾಧ್ಯಕ್ಷರು : ಈ ರೀತಿ ಶೂನ್ಯ ವೇಳೆಯಲ್ಲಿ ಚರ್ಚೆ ಮಾಡಿದರೆ ಹೇಗೆ? ಅವರು ಉತ್ತರ ಹೇಳುವುದನ್ನು ನೀವು ಕೇಳುವುದಿಲ್ಲ. ಮತ್ತೆ ಯಾವ ರೀತಿ ಚರ್ಚೆ ಮಾಡಬೇಕು. ಅವರು ಜಿಲ್ಲಾ ಉಸ್ತುವಾರಿ ಸಚಿವರಾಗಿ ಎರಡು ಮಾತುಗಳನ್ನು ಹೇಳುತ್ತಾರೆ.

(ಗೊಂದಲ)

ಶ್ರೀ ಎಂ. ಸಿ. ನಾಣಯ್ಯ : ಜಿಲ್ಲಾ ಉಸ್ತುವಾರಿ ಸಚಿವರಾಗಿ ಅವರ ಹತ್ತಿರ ಮಾಹಿತಿ ಇದೆ. ಅದಕ್ಕಾಗಿ ಅವರು ಹೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಈ ವಿಷಯದಲ್ಲಿ ನಾನು ಮಧ್ಯೆ ಪ್ರವೇಶ ಮಾಡಿಲ್ಲ ಎಂದು ಹೇಳಿದ್ದಾರೆ, ಅಲ್ಲಿ ಮುಗಿದು ಹೋಯಿತು.

ಶ್ರೀ ಬಿ. ಶಿವರಾಂ : ನಾವು ಆ ಭಾಗದ ಶಾಸಕರು, ನಾವು ಎಷ್ಟು ಸಾರಿ ಹೇಳುವುದು. ಅವರು ನಾವು ಹೇಳಿದ್ದನ್ನು ಏಕೆ ಕೇಳಬಾರದು.

ಶ್ರೀ ಹೆಚ್. ಡಿ. ರೇವಣ್ಣ : ಇದರಲ್ಲಿ ನನ್ನದು ಏನಾದರೂ ರಾಜಕೀಯ ಹಸ್ತಕ್ಷೇಪ ಇದೇ ಎಂಬುದನ್ನು ರುಜುವಾತು ಮಾಡಲಿ, ಈ ಸಭೆಯು ಏನು ತೀರ್ಮಾನ ಮಾಡುತ್ತದೆಯೋ ಅದಕ್ಕೆ ನಾನು ಭಾಗಿಯಾಗುತ್ತೇನೆ. ಸುಮ್ಮನೆ ಪ್ರತಿ ಹಂತದಲ್ಲೂ ರಾಜಕೀಯ ಹಸ್ತಕ್ಷೇಪ, ರಾಜಕೀಯ ಹಸ್ತಕ್ಷೇಪ ಎಂದು ಹೇಳಿದರೆ ಹೇಗೆ? ಹಿರಿಯ ಸದಸ್ಯರಾದ ರಾಮಸ್ವಾಮಿಯವರು ಇಲ್ಲೇ ಇದ್ದಾರೆ. ಏನು ಮಾತನಾಡಿದರು ಎಂಬುದನ್ನು ದಯಮಾಡಿ

ಅವರು ತಿಳಿದುಕೊಳ್ಳಲಿ. ಮರಿ ರಾಜರು ಎಂದರೆ ಅರ್ಥ ಏನು ಸ್ವಾಮಿ? ನಾವು ಏನು ಪಾಪದ ಕೆಲಸ ಮಾಡಿದ್ದೇವೆ? ದಯಮಾಡಿ ಅದನ್ನು ಈ ಸಭೆಯ ಮುಖೇನ ಹೇಳಲಿ. ಅಂತಹ ಪಾಪದ ಕೆಲಸ ನಾನು ಮಾಡಿದ್ದರೆ, ಈ ಜಾಗದಲ್ಲಿ 5 ನಿಮಿಷವೂ ಇರುವುದಿಲ್ಲ. ಮರಿ ರಾಜರ ಕೆಲಸ ಏನು ಮಾಡಿದ್ದೇವೆ ಎಂಬುದನ್ನು ಹೇಳಲಿ.

ಶ್ರೀ ಎ. ಟಿ. ರಾಮಸ್ವಾಮಿ : **** ಎಂದು ಹೇಳಿದೆ,

ಶ್ರೀ ಹೆಚ್. ಡಿ. ರೇವಣ್ಣ : ನಾನು ಏನಾದರೂ ಹಸ್ತಕ್ಷೇಪ ಮಾಡಿ, ಪಾಪದ ಕೆಲಸ ಮಾಡಿದ್ದರೆ ಈ ಜಾಗದಲ್ಲಿ 5 ನಿಮಿಷವೂ ಕೂಡ ಕುಳಿತುಕೊಳ್ಳುವುದಿಲ್ಲ. ದಯಮಾಡಿ ಹೇಳಿ.

ಶ್ರೀ ಎ. ಟಿ. ರಾಮಸ್ವಾಮಿ : ಅಲ್ಲಿ ಪೂರ್ತಿಯಾಗಿ ನಡೆಯತಕ್ಕಂಥದ್ದೇ ಹಸ್ತಕ್ಷೇಪ.

(ಗೊಂದಲ)

ಮಾನ್ಯ ಸದಸ್ಯರು : ಮಾನ್ಯ ವಿರೋಧ ಪಕ್ಷದ ನಾಯಕರಾದ ಖರ್ಗೆಯವರು ಹೇಳಿದ್ದಾರೆ. ತಾವು ದಯಮಾಡಿ ಅವರಿಗೆ ಹೇಳಿ, ಶಿವರಾಂ ಒಬ್ಬರಿಗೆ ಅಲ್ಲ ಮಾತನಾಡುವುದಕ್ಕೆ ಬರುವುದು, ಮಾತನಾಡುವುದಕ್ಕೆ ಎಲ್ಲರಿಗೂ ಅಧಿಕಾರ ಇರುತ್ತದೆ.

ಉಪಾಧ್ಯಕ್ಷರು : ಶಿವರಾಂರವರೇ, ತಾವು ಈ ತರಹ : ಮಾಡಿದರೆ ಹೇಗೆ, ಅವರು ಈಗಾಗಲೇ ಸ್ಪಷ್ಟ ಪಡಿಸಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು : ನೀವೆಲ್ಲರೂ ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಎಸ್.ಎಸ್. ಪಾಟೀಲರು ಬಂದ ಮೇಲೆ, ಅವರ ಕಡೆಯಿಂದ ಹೇಳಿಕೆಯನ್ನು ಕೊಡಿಸೋಣ.

ಶ್ರೀ ಹೆಚ್. ಡಿ. ರೇವಣ್ಣ : ಕಡತ ಬೇಕಾದರೆ ಸಭೆಯ ಮುಂದೆಯೇ ತರಿಸಿ, ವಿರೋಧ ಪಕ್ಷದ ನಾಯಕರ ಕಡೆ ಕೊಡಿ, ಅದರಲ್ಲಿ ಏನಾದರೂ ಹಸ್ತಕ್ಷೇಪ ಇದ್ದರೆ, ಅವರು ಏನು ಹೇಳುತ್ತಾರೋ..

(ಗೊಂದಲ)

ಉಪಾಧ್ಯಕ್ಷರು : ಎಸ್. ಎಸ್. ಪಾಟೀಲರನ್ನು ಕರೆಸುತ್ತೇನೆ, ಅದರ ಕಡೆಯಿಂದ ಹೇಳಿಕೆಯನ್ನು ಕೊಡಿಸುತ್ತೇವೆ, ತಾವು ದಯಮಾಡಿ ಕೂಡುವುದಕ್ಕೆ ಹೇಳಿ, ಮಾನ್ಯ

**** ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ

ಶಿವರಾಂರವರೇ, ನೀವು ಈ ರೀತಿ ಪದೇ ಪದೇ ಎದ್ದು ನಿಂತು ಹೇಳುವುದು ಸರಿಯಿಲ್ಲ. ಇದನ್ನು ಇಲ್ಲಿಗೆ ಮುಕ್ತಾಯ ಮಾಡುತ್ತೇನೆ. ನಾನು ಹೇಳುವುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಇದು ಸರಿಯಿಲ್ಲ.

ಶ್ರೀ ಎ. ಟಿ.ರಾಮಸ್ವಾಮಿ : ಅವರು ರಿಜಿಸ್ಟ್ರೇಷನ್ ಮಾಡಿಕೊಡುತ್ತೇವೆಂದು ಹೇಳಿದ್ದರು, ಆದರೆ ಇದುವರೆಗೆ ಮಾಡಿಸಿಕೊಡಲಿಲ್ಲ.

ಉಪಾಧ್ಯಕ್ಷರು : ಎಸ್. ಎಸ್. ಪಾಟೀಲರು ಬಂದು ಹೇಳಿಕೆ ಕೊಡುತ್ತಾರೆ, ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎ. ಟಿ. ರಾಮಸ್ವಾಮಿ : ಇಲ್ಲವಾದರೆ ನಾವು ಇದನ್ನುಪ್ರತಿಭಟಿಸಿ ಧರಣಿ ಮಾಡಬೇಕಾಗುತ್ತದೆ.

ಶ್ರೀ ಎಂ. ಸಿ. ನಾಣಯ್ಯ : ಪ್ರತಿಯೊಂದಕ್ಕೆ ಧರಣಿ ಮಾಡಿದರೆ,ಇದು ಏನು ಕಥೆನಾ?

(ಗೊಂದಲ)

ಉಪಾಧ್ಯಕ್ಷರು : ನಿಮ್ಮ ಸದಸ್ಯರಿಗೆ, ನೀವು ಸ್ವಲ್ಪ ಹೇಳಬೇಕು. ಎಸ್. ಎಸ್. ಪಾಟೀಲರು ಬಂದ ಮೇಲೆ ಹೇಳಿಕೆಯನ್ನು ಕೊಡುತ್ತಾರೆ. ತಾವು ಪ್ರತಿಯೊಂದಕ್ಕೆ ಧರಣಿ, ಧರಣಿ ಎಂದು ಹೇಳಿದರೆ ಏನು?

(ಶ್ರೀ ಎ. ಟಿ. ರಾಮಸ್ವಾಮಿ ಮತ್ತು ಶ್ರೀ ಬಿ. ಶಿವರಾಂರವರು ಧರಣಿ ಕುಳಿತರು)

ಉಪಾಧ್ಯಕ್ಷರು : ದಯಮಾಡಿ ತಮ್ಮ ತಮ್ಮ ಸ್ಥಾನಕ್ಕೆ ಹೋಗಿ, ನಾನು ಹೇಳುವುದನ್ನು ಕೇಳಿ, ಸಹಕಾರ ಸಚಿವರು ಈಗ ಬಂದು ಹೇಳಿಕೆ ಕೊಡುತ್ತಾರೆ. ಇದು ಒಳ್ಳೆಯಕದಲ್ಲ.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಸಹಕಾರ ಸಚಿವರು ಬಂದು ಇದರ ಬಗ್ಗೆ ವಿವರವಾದಂಥ ಉತ್ತರವನ್ನು ಕೊಡುತ್ತಾರೆ. ದಯಮಾಡಿ ಮಾನ್ಯ ಸದಸ್ಯರುಗಳು ಧರಣಿ ಮಾಡುವುದನ್ನು ಬಿಟ್ಟು ತಮ್ಮ ಸ್ಥಾನಕ್ಕೆ ಹೋಗಬಹುದು.

(ಭಾವಿಯಲ್ಲಿ ಧರಣಿ ಕುಳಿತಿದ್ದ ಮಾನ್ಯ ಸದಸ್ಯರುಗಳಾದ ಬಿ. ಶಿವರಾಮುರವರು ಹಾಗೂ ಎ.ಟಿ. ರಾಮಸ್ವಾಮಿಯವರು ತಮ್ಮ ಸ್ಥಾನಗಳಿಗೆ ಹಿಂದಿರುಗಿದರು)

ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್ : ನಾವು ಮಹಿಳೆಯರು ಬ್ಯಾಂಕ್ ಮಾಡಬೇಕಾದರೆ ನಾವು ಕೂಡ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಸಚಿವರು ಬಂದು ಉತ್ತರ ಹೇಳುತ್ತಾರೆ ಎಂದು ಹೇಳಿದ ನಂತರ ಇವರಿಗೆ ಏಕೆ ಅವಕಾಶ ಕೊಡಬೇಕು?

(ಗೊಂದಲ)

ಶ್ರೀ ಹೆಚ್. ಶಿವಪ್ಪ : ಮಾನ್ಯ ಅಧ್ಯಕ್ಷರೇ, ಚಕ್ರವರ್ತಿಗಳ ಕಾಲ ಮುಗಿದು ಬಹಳ ವರ್ಷಗಳಾದವು. **** ತಾವುಗಳು ****

ಉಪಾಧ್ಯಕ್ಷರು : ಅದು ಅಂಥ ಆಕ್ಷೇಪಾರ್ಹ ಶಬ್ದ ಆದರೆ ಅದನ್ನು ತೆಗೆದು ಹಾಕೋಣ. ತಾವುಗಳು ಕುಳಿತುಕೊಳ್ಳಿ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ : **** ಡಿಲ್ಲಿಯಲ್ಲಿ ಇದ್ದಾರೆ, ಆದರೆ ಅವರು ಇಲ್ಲಿ **** ಎಂದೇನೋ ಹೇಳಿದ್ದಾರೆ. ಅದರಲ್ಲಿ ಏನು ತಪ್ಪಿಲ್ಲವಲ್ಲ?

(ಗೊಂದಲ)

ಉಪಾಧ್ಯಕ್ಷರು : ತಾವುಗಳು ಈ ರೀತಿಯಲ್ಲಿ ಚರ್ಚೆ ಮಾಡಿದರೆ ಜೀರೋ ಅವರನ್ನೆಲ್ಲಾ ರದ್ದುಪಡಿಸಬೇಕಾಗುತ್ತದೆ. ಮುಂದಿನ ಕಾರ್ಯಕಲಾಪಗಳಿಗೆ ಹೋಗಬೇಕಾಗುತ್ತದೆ. ತಾವುಗಳು ಒಂದೊಂದು ನಿಮಿಷ ಮಾತನಾಡುವುದಾದರೆ ಅವಕಾಶ ಕೊಡುತ್ತೇನೆ.

ಖ) ಕುಂದಾಪುರ ವಿಧಾನ ಸಭಾಕ್ಷೇತ್ರದಲ್ಲಿ ಒಬ್ಬ ದಲಿತನ ಕೊಲೆ

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಅಧ್ಯಕ್ಷರೇ, ಶೂನ್ಯವೇಳೆಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡತಕ್ಕಂಥ ವೇಳೆಯಲ್ಲಿ ತಮ್ಮ ಗಮನಕ್ಕೆ ತಂದು ಪ್ರಸ್ತಾಪ ಮಾಡಿದಾಗ ಸಂಬಂಧಪಟ್ಟ ಸಚಿವರು ಇದ್ದರೆ ಸಮರ್ಪಕವಾದ ಉತ್ತರಗಳು ಸಿಗುತ್ತವೆ. ಮಾನ್ಯ ರಾಮಸ್ವಾಮಿಯವರು ಪ್ರಸ್ತಾಪ ಮಾಡಿದ ವಿಚಾರಕ್ಕೂ ಸಹ ಸರಿಯಾದ ಉತ್ತರವೂ ಸಿಗಲಿಲ್ಲ. ಅದೇ ರೀತಿಯಲ್ಲಿ ನಾನೇನು ಪ್ರಸ್ತಪ ಮಾಡಲಿದ್ದೇನೆ ಅದಕ್ಕೂ ಕೂಡ ಸರಿಯಾದ ಉತ್ತರವು ಸಿಗುವುದಿಲ್ಲ ಎಂಬ ಭಾವನೆಯು ಇದ್ದರೂ ಕೂಡ ಪ್ರಸ್ತಾಪ ಮಾಡುತ್ತೇನೆ. ನನ್ನ ಕ್ಷೇತ್ರದಲ್ಲಿ ಒಬ್ಬ ದಲಿತ ಯುವಕನ ಕೊಲೆಯಾಯಿತು. ಆ ಸಂದರ್ಭದಲ್ಲಿ ತನಿಖೆ ಮಾಡಿದ ಪೋಲೀಸ್ ಅಧಿಕಾರಿಗಳ ದೌರ್ಜನ್ಯದಿಂದ ಅವರ ಕುಟುಂಬದಲ್ಲಿರತಕ್ಕಂಥ ಮತ್ತೊಬ್ಬ ಮಹಿಳೆಯು ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥ ಸಂದರ್ಭ ಬಂತು. ಉಡುಪಿ ತಾಲ್ಲೂಕಿನ ಬಿಲ್ಲಾಡಿ ಗ್ರಾಮದಲ್ಲಿ ಹರಿಜನರಾಗಿರತಕ್ಕ ಎನ್ನತಕ್ಕಂಥವನು 21-12-1996ರಂದು ಕಾಣೆಯಾಗಿದ್ದಾನೆ. ಅವರ ಮೃತದೇಹ 1-1-1997ರಂದು ಸಿಗುತ್ತದೆ. ಕೋಟಾ ಪೋಲೀಸ್ ಠಾಣೆಯವರು ಖಾದು ಕೊಲೆ ಎನ್ನತಕ್ಕಂಥ ಹಂತಕ್ಕೆ ಬಂದು ಕೊಲೆ ಮಾಡಲು

**** ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.